**ಅರ್ಜಿಯ ಮೇರೆಗೆ ಇಂದು ದಿನಾಂಕ 01.08.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ವಾಟೀ ಸವಾಲುಃ ಶ್ರೀ ಎಸ್ ಪಿ ಇ ಪ್ರತಿವಾದಿ ನಂ.4 ಮತ್ತು 5 ರಿಂದ 7 ಪರ ವಕೀಲರಿಂದಃ**

2. ನಾನು 10 ನೇ ತರಗತಿವರೆಗೆ ಓದಿದ್ದೇನೆ. ಮುನಿತಾಯಮ್ಮ ನನ್ನ ತಾಯಿ ಇದ್ದು ವಾದ ಪತ್ರದ ವಿಷಯ ಸಂಗತಿಗಳು ನನಗೆ ಗೊತ್ತಿವೆ. ಮುತ್ತೂರು ಬಸ್ಸಪ್ಪ ಇವರು ಮುನಿಯಮ್ಮ ಇವರ ಜೊತೆ ಎರಡನೇ ಮದುವೆ ಆಗಿರುವ ಕುರಿತು ದಾಖಲೆಯನ್ನು ಕೊಟ್ಟಿದ್ದೇನೆ. ಈ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿವಾಹದ ಕುರಿತು ಪ್ರಸ್ತುತ ನನ್ನ ಹತ್ತಿರ ಯಾವುದೇ ದಾಖಲೆಗಳಿಲ್ಲ. ನನ್ನ ತಾಯಿ ಸದರಿ ಮುತ್ತೂರು ಬಸ್ಸಪ್ಪನ ಎರಡನೇ ಹೆಂಡತಿಯ ಮಗಳು ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಈ ಹೇಳಿಕೆಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವೆ ಚಾಲ್ತಿಯಲ್ಲಿದ್ದಾಗ ನನ್ನ ತಂದೆ ಮುನಿಶಾಮಪ್ಪ 5-6 ವರ್ಷದ ಹಿಂದೆ ತೀರಿ ಹೋಗಿದ್ದಾರೆ, ಖಚಿತ ದಿನಾಂಕ ನನಗೆ ನೆನಪಿಲ್ಲ. ನನ್ನ ತಂದೆಯ ನುಡಿ ಸಾಕ್ಷ್ಯವನ್ನು ಮಾಡಿಸಲು ತೊಂದರೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿಯವರ ನುಡಿ ಸಾಕ್ಷ್ಯವನ್ನು ಮಾಡಿಸಿದರೆ ನಿಜಾಂಶ ಹೊರಬಿಳುತ್ತದೆ ಎಂದು ಅವರ ನುಡಿ ಸಾಕ್ಷ್ಯವನ್ನು ಮಾಡಿಸಿಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿ ನಂ.5 ರಿಂದ 7 ರ ಕ್ರಯ ಪತ್ರವನ್ನು ನಾನು ಈ ದಾವೆಯಲ್ಲಿ ಪ್ರಶ್ನಿಸಿ ಯಾವುದೇ ರೀತಿ ಮಾಗಣಿ ಕೇಳಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರವನ್ನು ನಾನು ನೋಡಿಲ್ಲ.

5. ಪ್ರತಿವಾದಿ ನಂ. 1 ಮತ್ತು ಅವರ ಪತ್ನಿ, ಮಕ್ಕಳು ಎಲ್ಲರೂ ಸೇರಿ ಪ್ರತಿವಾದಿ ನಂ. 5 ರಿಂದ 7 ಇವರಿಗೆ ಕ್ರಯ ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ದುರುದ್ದೇಶದಿಂದ ಮಾಡಿಕೊಟ್ಟಿದ್ದಾರೆ ಎನ್ನುತ್ತಾರೆ. ಕ್ರಯ ಪತ್ರದ ಪಕ್ಷಗಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ತೊಂದರೆ ಇರಲಿಲ್ಲ ಎಂದರೆ ನಿಜ.

6. ಸದರಿ ಕ್ರಯವ ಸ್ವತ್ತು ಮುತ್ತೂರು ಬಸ್ಸಪ್ಪನ ಪಿತ್ರಾರ್ಜಿತ ಆಸ್ತಿ ಎನ್ನುವ ಪ್ರಶ್ನೆಗೆ ಸದರಿ ಆಸ್ತಿ ಅವರ ಸ್ವಯಾರ್ಜಿತ ಆಸ್ತಿ ಎಂದು ಹೇಳುತ್ತಾರೆ. ಸದರಿ ಸರ್ವೇ ನಂ. 12 ಇದ್ದು ವಿಸ್ತೀರ್ಣ 4 ಎಕರೆ 31 ಗುಂಟೆ, ಸರ್ವೇ ನಂ.14 ರಲ್ಲಿ 24 ಗುಂಟೆ, ಸರ್ವೇ ನಂ.17 ರಲ್ಲಿ 1 ಎಕರೆ 3 ಗುಂಟೆ, ಸರ್ವೇ ನಂ.88/2 ರಲ್ಲಿ 2 ಎಕರೆ 8 ಗುಂಟೆ ಮತ್ತು ಮನೆ ಜಾಗ, ಇನ್ನೊಂದು ಜಮೀನಿನ ಸರ್ವೇ ನಂ. ನೆನಪು ಬರುತ್ತಿಲ್ಲ, ಇವೆಲ್ಲವೂ ಅನುಭೋಗದ ನಾತೆಯಿಂದ ಬಂದಿರುವ ಜಮೀನುಗಳು ಇರುತ್ತವೆ.

7. ಮತ್ತೂರು ಬಸ್ಸಪ್ಪನಿಗೆ ಪಿಳ್ಳಮ್ಮ ಎನ್ನುವ ತಂಗಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಿಳ್ಳಮ್ಮನ ವಾರಸುದಾರರು ಅರ್ಜಿಯನ್ನು ಪುರಸ್ಕರಿಸಿದ್ದು, ಅದನ್ನು ಪ್ರಶ್ನಿಸಿ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಕರಾರು ಅರ್ಜಿಯನ್ನು ಸಲ್ಲಿಸಿದ್ದು ಅದರಲ್ಲಿ ತಡೆ ಆಜ್ಞೆ ಸಿಕ್ಕಿರುತ್ತದೆ ಎಂದರೆ ನಿಜ.

8. ನಾನು ಸಲ್ಲಿಸಿರುವ ವಂಶವೃಕ್ಷ ನಿ.ಪಿ.2 ಸುಳ್ಳು ದಾಖಲೆ ಎಂದರೆ ಸಾಕ್ಷಿದಾರರು ಕಂದಾಯ ಇಲಾಖೆಯವರು ನೀಡಿರುವ ದಾಖಲೆ ಎಂದು ಹೇಳುತ್ತಾರೆ. ಸದರಿ ಕಂದಾಯ ಇಲಾಖೆಯವರು ವಿಚಾರಣೆ ಮಾಡಿ ನೀಡಿರುವ ದಾಖಲಾತಿ. ಈ ಹೇಳಿಕೆಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.17 ರಿಂದ 27 ರವೆರೆಗ ಇರುವ ದಾಖಲಾತಿಯ ವಿವರಗಳನ್ನು ಸಾಕ್ಷಿದಾರರಿಗೆ ಹೇಳಿ ಸದರಿ ದಾಖಲೆಗಳು ಸವಿಷ್ಟಿಕರಣ ದಾಖಲೆಗಳು ಎಂದು ಸೂಚಿಸಲಾಗಿ, ಸದರಿ ದಾಖಲೆಗಳನ್ನು ಸಾಕ್ಷಿದಾರರು ನೋಡಿ ಸುಳ್ಳು ಎಂದು ಹೇಳುತ್ತಾರೆ. ನಿ.ಪಿ.17 ಮತ್ತು 18 ರಲ್ಲಿ ದಾಖಲೆ ಒದಗಿಸಿರುವ ಉಪತಹಸೀಲ್ದಾರ ಇವರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.20 ರಲ್ಲಿ ಕಂಡು ಬರುವ ಗ್ರಾಮ ಲೆಕ್ಕಾಧಿಕಾರಿಗಳ ಸಹಿ ನಿ.ಪಿ.22 ರಿಂದ 25 ರವರೆಗೆ ಇರುವ ಸಹಿಗಳಿಗೆ ಹೋಲುವುದಿಲ್ಲ, ಆದ್ದರಿಂದ ಸದರಿ ದಾಖಲೆಗಳು ಸೃಷ್ಟಿಕರಣ ಮಾಡಿರುವ ದಾಖಲೆಗಳು ಎಂದರೆ ಸರಿಯಲ್ಲ. ನಿ.ಪಿ.22 ಮತ್ತು 23 ರಲ್ಲಿ ಕಂಡು ಬರುವ ಕೆಂಪಮ್ಮ ಮತ್ತು ಮುನಿಯಮ್ಮ ಇವರ ಹೆಬ್ಬಟ್ಟಿನ ಗುರುತುಗಳು ಸದರಿ ಕೆಂಪಮ್ಮ ಮತ್ತು ಮುನಿಯಮ್ಮ ಇವರ ನೈಜ ಹೆಬ್ಬಟ್ಟಿನ ಗುರುತುಗಳು ಅಲ್ಲಎಂದರೆ ಸರಿಯಲ್ಲ. ಸದರಿ ಸಹಿಗಳು ನಾವೇ ನಕಲು ಮಾಡಿರುವ ಸಹಿಗಳು ಎಂದರೆ ಸರಿಯಲ್ಲ. ನಿ.ಪಿ.24 ರಲ್ಲಿ ಇರುವ ಸಾಕ್ಷಿಗಳಲ್ಲಿ ರಂಗಪ್ಪ ಎನ್ನುವರ ನುಡಿ ಸಾಕ್ಷ್ಯವನ್ನು ಈಗಾಗಲೇ ಮಾಡಿಸಿರುತ್ತೇವೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**